# ಪುಸ್ತಕ ಪರಾಗ

## ಪುಟ್ಟ ಪಾದಗಳ ಗುರುತು




ಹಿರಿಯ ಪತ್ರಕರ್ತ ಜಿ.ಎನ್. ರಂಗನಾಥ ರಾವ್ ಅವರ ವಿಮರ್ಶೆ ಮತ್ತು ಅನುವಾದ ಬರಹಗಳು ಓದುಗರಿಗೆ ಪರಿಚಿತ. 'ಪುಟ್ಟ ಪಾದಗಳ ಪುಳಕ' ಸಂಕಲನದ ಹತ್ತು ಲಲಿತ ಪ್ರಬಂಧಗಳು, ಗಂಭೀರ ವ್ಯಕ್ತಿತ್ವದ ಲೇಖಕನ ಮತ್ತೊಂದು ಆಯಾಮವನ್ನು ಪರಿಚಯಿಸುವಂತಿವೆ.


ನಿರ್ದಿಷ್ಟ ವಿಷಯವೊಂದಕ್ಕೆ ಸಂಬಂಧಿಸಿದ ವಿವಿಧ ಸಂಗತಿಗಳನ್ನು ಕಲೆಹಾಕಿ, ಆ ಮಾಹಿತಿಯನ್ನು ಹರಟೆಯ ರೂಪದಲ್ಲಿ ಪೋಣಿಸುವುದು ಬಹುತೇಕ ಲಲಿತ ಪ್ರಬಂಧಗಳ ಸಾಮಾನ್ಯ ಲಕ್ಷಣ. ರಂಗನಾಥ ರಾವ್ ಅವರ ಪ್ರಬಂಧಗಳಲ್ಲೂ ಹರಟೆ ಇದೆ. ಆದರೆ, ಆ ಹರಟೆ ಮಾತಿನ ವಾಚಾಳಿತನಕ್ಕೆ ಸೀಮಿತವಾಗದೆ, ಸಹೃದಯರ ಮನಸ್ಸಿನಲ್ಲಿ ವಿಚಾರದ ತರಂಗಗಳನ್ನೂ ಏಳಿಸುತ್ತದೆ. ಲಾಲಿತ್ಯ ಗುಣ ಇಲ್ಲಿನ ಎಲ್ಲ ಪ್ರಬಂಧಗಳ ಸ್ಥಾಯಿ ಗುಣವೂ ಆಗಿದೆ.

ವೃತ್ತಿ ಹಾಗೂ ವೈಯಕ್ತಿಕ ಜೀವನದ ಅನುಭವಗಳೊಂದಿಗೆ ಓದಿನ ಹರಹೂ ಹದವಾಗಿ ಮಿಳಿತಗೊಂಡ ಕಾರಣದಿಂದಾಗಿ, ಜಿ.ಎನ್.ಆರ್. ಪ್ರಬಂಧಗಳು ಚೇತೋಹಾರಿಯಾಗಿವೆ. 'ಹರಕಲು ಬನೀನು', 'ಸಂವೇದನೆಯೂ ಕೋವಿಡ್‌ನ ಒಂದು ಮುಂಜಾನೆಯೂ', 'ಪುಟ್ಟ ಪಾದಗಳ ಪುಳಕ' ಪ್ರಬಂಧಗಳು ಏಕಾಂತವನ್ನೂ ಲೋಕಾಂತವನ್ನೂ ಒಳಗೊಳ್ಳುವ ವಿನ್ಯಾಸ ಸೊಗಸಾಗಿದೆ. ಪ್ರಬಂಧಕಾರರ ಪತ್ನಿ ಇಲ್ಲಿನ ಹಲವು ಪ್ರಬಂಧಗಳಲ್ಲಿ ಸುಳಿದು ಮಾಯವಾಗುತ್ತಾರೆ. ಅಂತೆಯೇ, ಜೀವನಚೈತ್ರದ ಹಲವು ಸುಂದರ–ಸಾರ್ಥಕ ನೆನಪುಗಳು ಬರಹಗಳ ಆರ್ದ್ರತೆಯನ್ನು ಹೆಚ್ಚಿಸುವುದರೊಂದಿಗೆ, ಪ್ರಸನ್ನ ಗುಣವನ್ನೂ ತಂದುಕೊಟ್ಟಿವೆ.

'ಮಹಾತ್ಮರ ಪ್ರಯೋಗಗಳು' ಸಂಕಲನದ ಭಿನ್ನ ಬರಹ. ಗಂಭೀರವೂ ಆದ ಈ ಪ್ರಬಂಧ, ಗಾಂಧಿ ಮಹಾತ್ಮನ ಕೃತಿಗಳೊಂದಿಗೆ ಲೇಖಕರು ನಡೆಸಿರುವ ಅನುಸಂಧಾನದ ಫಲಶ್ರುತಿ.

**ಲೇ: ಜಿ.ಎನ್. ರಂಗನಾಥ ರಾವ್; ಬೆ: ₹ 120; ಪ್ರ: ಅಂಕಿತ ಪುಸ್ತಕ, ಬೆಂಗಳೂರು; ಫೋ: 080–26617100**

## ಕೆ.ಎಸ್. ನಿಸಾರ್ ಅಹಮದ್




ಕನ್ನಡದ ಅನನ್ಯ ಕವಿಯೊಬ್ಬರನ್ನು ಹೊಸ ತಲೆಮಾರಿಗೆ ಪರಿಚಯಿಸುವ ನಿಟ್ಟಿನಲ್ಲಿ 'ಕೆ.ಎಸ್. ನಿಸಾರ್ ಅಹಮದ್', ಅಗತ್ಯವಾಗಿರುವ ಕೃತಿ. ನಿಸಾರರೊಂದಿಗೆ ಒಡನಾಡಿರುವ ಹಾಗೂ ಅವರ ಆಯ್ದ ಕವಿತೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿರುವ ಎಂ.ಎಸ್. ರಘುನಾಥ್ ಈ ಕೃತಿಯ ಲೇಖಕರು. ಕವಿಯ ಬದುಕು, ವ್ಯಕ್ತಿತ್ವ ಹಾಗೂ ಸಾಹಿತ್ಯ ಸಾಧನೆಯನ್ನು ಆರು ಭಾಗಗಳಲ್ಲಿ ಕಟ್ಟಿಕೊಡುವ ಈ ಕೃತಿ ನಿಸಾರರನ್ನು ಸಮಗ್ರವಾಗಿ ಓದಲು ಪ್ರೇರೇಪಿಸುವಂತಿದೆ.

ರವೀಂದ್ರನಾಥ ಟ್ಯಾಗೋರರ ಕುರಿತು, 'ಕಲೆಯೊಂದು ಕರವಸ್ತ್ರ, ಜಗದ ಕೊಳೆ ಕಂಬನಿಗೆ / ಎಷ್ಟೊಂದು ಹೃದಯಗಳ ಪರಿಚಾರಿಕೆ' ಎಂದು ನಿಸಾರರು ಬರೆದಿರುವುದನ್ನು, ಸ್ವತಃ ಕವಿಯ ಕಾವ್ಯಕ್ಕೂ ಲೇಖಕರು ಅನ್ವಯಿಸುತ್ತಾರೆ. 'ನಿತ್ಯೋತ್ಸವ'ದ ಪ್ರಭಾವಳಿಯಲ್ಲಷ್ಟೇ ನಿಸಾರರನ್ನು ಗುರ್ತಿಸದೆ, ಕನ್ನಡ ಕಾವ್ಯಲೋಕವನ್ನು ನಿಸಾರ್‌ರ ಉಪಮೆ–ರೂಪಕಗಳು ಯಾವೆಲ್ಲ ಬಗೆಯಲ್ಲಿ ಸಮೃದ್ಧಗೊಳಿಸಿವೆ ಎನ್ನುವುದರ ವಿಶ್ಲೇಷಣೆ ಗಮನಸೆಳೆಯುವಂತಿದೆ. ಅಷ್ಟೇನೂ ಜನಪ್ರಿಯವಲ್ಲದೆ ನಿಸಾರರ ಗದ್ಯದ ವಿಶ್ಲೇಷಣೆಯೂ ಕೃತಿಯಲ್ಲಿದ್ದು, ನಿಸಾರರ ಮರು ಓದಿಗೆ ಒತ್ತಾಯಿಸುವಂತಿದೆ.

**ಲೇ: ಎಂ.ಎಸ್. ರಘುನಾಥ್; ಬೆ: ₹ 150; ಪ್ರ: ಕೇಂದ್ರ ಸಾಹಿತ್ಯ ಅಕಾಡೆಮಿ; ಫೋನ್: 080–22130870.**